ಬೀದರ್ ಜಿಲ್ಲೆಯ ಭಾಲ್ಕಿ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಗೆ ಬರುವ ಇಂಜಿನಿಯರಿಂಗ್ ಕಾಲೇಜುಗಳ ವಿದ್ಯಾರ್ಥಿಗಳಿಗೆ ಸಂಬಂಧಿಸಿದಂತೆ ಕಳೆದ 3 ವರ್ಷಗಳ ಅವಧಿಯಲ್ಲಿ ಬಂದಿರುವ ಕ್ಲೈಮುಗಳ ಮೊತ್ತ, ಪಾವತಿಸಿದ ಶುಲ್ಕ ಹಾಗೂ ಬಾಕಿ ಇರುವ ಶುಲ್ಕದ ವಿವರಗಳು ಈ ಕೆಳಕಂಡಂತಿವೆ.

ಕ್ರ. ಸಂ.	ವರ್ಷ	ಸ್ವೀಕರಿಸಿದ ಕ್ಲೇಮುಗಳ ಒಟ್ಟು ಮೊತ್ತ	ಸ್ವೀಕರಿಸಿದ ಕ್ಲೇಮುಗಳ ವಿದ್ಯಾರ್ಥಿಗಳ ಸಂಖ್ಯೆ	ಪಾವತಿಸಿದ ಶುಲ್ಕದ ಒಟ್ಟು ಮೊತ್ತ	ಶುಲ್ಕ ಮರು ಪಾವತಿಸಿದ ವಿದ್ಯಾರ್ಥಿಗಳ ಸಂಖ್ಯೆ	ಬಾಕಿ ಪಾವತಿಸಿ ಬೇಕಾದ ಮೊತ್ತ	ಬಾಕಿ ಪಾವತಿಸ ಬೇಕಾದ ವಿದ್ಯಾರ್ಥಿಗಳ ಸಂಖ್ಯೆ
1	2	3	4	5	6	7	8
1	2005 –06	11,24,180	135	5,28,680	63	5,95,500	72
2	2006 –07	25,71,380	170	25,55,380	169	16,000	01
3	2007 –08	58,48,520	301	–	–	52,48,520	301
ಒಟ್ಟು		**95,44,080**	**606**	**30,84,060**	**232**	**64,60,020**	**374**

31 ಶ್ರೀ ಖಾದರ್. ಯು.ಟಿ.(ಮಂಗಳೂರು)

ಬಿ.ಎನ್.ಬಚ್ಚೇಗೌಡ(ಕಾರ್ಮಿಕ ಸಚಿವರು)

ಅ ರಾಜ್ಯದಲ್ಲಿ ದರ್ಜಿ [ಟೈಲರಿಂಗ್] ವೃತ್ತಿಯಿಂದ ಜೀವನ ಸಾಗಿಸುತ್ತಿರುವ ಕಾರ್ಮಿಕರಿಗೆ ಅವರ ಜೀವನ ಮಟ್ಟವನ್ನು ಸುಧಾರಿಸಲು ದರ್ಜಿಗಳ "ಕಲ್ಯಾಣ ನಿಧಿ" ಯನ್ನು ಸ್ಥಾಪಿಸಲು ಸರ್ಕಾರವು ಉದ್ದೇಶಿಸಿದೆಯೇ?

ದರ್ಜಿ ಕಾರ್ಮಿಕರನ್ನು ಅಸಂಘಟಿತ ವಲಯದ ಕಾರ್ಮಿಕರನ್ನಾಗಿ ಗುರುತಿಸಲಾಗಿರುತ್ತದೆ.

ಭಾರತ ಸರ್ಕಾರವು ಅಸಂಘಟಿತ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಒದಗಿಸುವ ನಿಟ್ಟಿನಲ್ಲಿ ಅಸಂಘಟಿತ ಕಾರ್ಮಿಕರ ಸಮಾಜಿಕ ಭದ್ರತೆಯ ಕಾಯಿದೆ–2008ನ್ನು ರಚಿಸಿದೆ.

ಸದರಿ ಕಾಯ್ದೆಗೆ ನಿಯಮಗಳನ್ನು ಕೇಂದ್ರ ಸರ್ಕಾರವರು ರೂಪಿಸ ಬೇಕಾಗಿದೆ. ಕಾಯಿದೆ ಕಲಂ 1[3] ರಲ್ಲಿ ಕೇಂದ್ರ ಸರ್ಕಾರ ತನ್ನ ಅಧಿಕೃತ ರಾಜ್ಯ ಪತ್ರದಲ್ಲಿ ಅಧಿ ಸೂಚನೆ ಹೊರಡಿಸಿದ ದಿನಾಂಕದಿಂದ ಕಾನೂನು ಜಾರಿಗೆ ಬರುತ್ತದೆ

ಎಂದು ಸೂಚಿಸಿದ್ದು ಅಧಿಸೂಚನೆಯನ್ನು ಕೇಂದ್ರ ಸರ್ಕಾರವು ಇನ್ನೂ ಹೊರಡಿಸಿರುವುದಿಲ್ಲ.

ಕೇಂದ್ರ ಸರ್ಕಾರವು ನಿಯಮಗಳನ್ನು ರಚಿಸಿದ ನಂತರ ರಾಜ್ಯ ಸರ್ಕಾರವು ನಿಯಮಗಳನ್ನು ರೂಪಿಸಿ ಅಸಂಘಟಿತ ಕಾರ್ಮಿಕರ ಕಲ್ಯಾಣ ಮಂಡಳಿಯನ್ನು ರಚಿಸಲಾಗುವುದು ಹಾಗೂ ಇದರ ಅಡಿಯಲ್ಲಿ ಕಲ್ಯಾಣ ಕಾರ್ಯಕ್ರಮ ಗಳನ್ನು ಹಮ್ಮಿಕೊಂಡು, ಸಹಾಯ ಸವಲತ್ತುಗಳನ್ನು ಒದಗಿಸಲಾಗುವುದು.

ಆ ಹಾಗಿಲ್ಲದಿದ್ದಲ್ಲಿ, ಯಾವ ಯೋಜನೆಯಲ್ಲಿ ಇವರುಗಳಿಗೆ ಸಹಾಯ, ಸವಲತ್ತು ದೊರಕಿಸಲಾಗುವುದು;

ಉದ್ಭವಿಸುವುದಿಲ್ಲ

ಇ ಈ ಸಾಲಿನಲ್ಲಿಯೇ ಇದನ್ನು ಜಾರಿಗೊಳಿಸಲಾಗುವುದೇ?

ಕೇಂದ್ರ ಸರ್ಕಾರವು ಕಾಯ್ದೆಯನ್ನು ಜಾರಿಗೆ ತಂದು, ಅದರ ಅಡಿಯಲ್ಲಿ ನಿಯಮಗಳನ್ನು ರೂಪಿಸಿದ ತಕ್ಷಣವೇ ರಾಜ್ಯ ಸರ್ಕಾರವು ಕೂಡ ನಿಯಮಗಳನ್ನು ರಚಿಸಿ ಅದರ ಅಡಿ ಅಸಂಘಟಿತ ಕಾರ್ಮಿಕರ ಕಲ್ಯಾಣ ಮಂಡಳಿಯನ್ನು ರಚಿಸಲು ಕ್ರಮ ತೆಗೆದುಕೊಳ್ಳಲಾಗುವುದು.

32 ಶ್ರೀ ಯು.ಟಿ.ಖಾದರ್, ಎಂ.ಎಲ್.ಎ

ಪ್ರೊ.ಮುಮ್ತಾಜ್(ಅಲಿ ಖಾನ್, ಹೆಚ್, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು)

ಅ ಸರ್ಕಾರದ ವತಿಯಿಂದ ಹೆಚ್ ಯಾತ್ರೆಗೆ ಹೋಗುವ ಯಾತ್ರಾರ್ಥಿಗಳಿಗೆ ಕೆಲವು ಜವಾಬ್ದಾರಿ ವ್ಯಕ್ತಿಗಳಿಂದ ಕಿರುಕುಳ ಉಂಟಾಗಿರುವ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದೆಯೆ?

2008–09ನೇ ಸಾಲಿನಲ್ಲಿ ಇಂತಹ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ

ಆ ಈ ರೀತಿಯ ಪ್ರಕರಣಗಳಲ್ಲಿ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ.

– ಉದ್ಭವಿಸುವುದಿಲ್ಲ –

ಇ ಇನ್ನು ಮುಂದೆ ಯಾವುದೇ ಯಾತ್ರಾರ್ಥಿಗಳಿಗೆ ತೊಂದರೆಯುಂಟಾಗದಂತೆ ಸರ್ಕಾರವು ಸೂಕ್ತ ಕ್ರಮ ಕೈಗೊಳ್ಳುವುದೇ?

– ಉದ್ಭವಿಸುವುದಿಲ್ಲ –